ಬಿ.ಡಿ. ಶರ್ಮಾ, ಗೋವಿಂದರಾವ್ ದೇಶಮುಖ, ಸುಕುಮಾರನ್ ಡಿಸೋಜಾ ಮತ್ತು ನಾನು ಎಲ್ಲರೂ ಒಂದೇ ಕಾಲೋನಿಯ ನಿವಾಸಿಗಳು. ಹಾಗೆಂದು ನಮ್ಮ ಮನೆಗಳು ಹತ್ತಿರವೇನಿಲ್ಲ. ಆದರೆ ಪ್ರತಿನಿತ್ಯ ಬೆಳಗ್ಗೆ ಮತ್ತು ಸಾಯಂಕಾಲ ವಾಕಿಂಗ್ ಹೋಗುವಾಗ ನಾವೆಲ್ಲ ಜೊತೆಯಾಗಿಯೇ ಹೋಗುವುದು ಬಹಳ ದಿನಗಳಿಂದ ರೂಢಿಸಿಕೊಂಡುಬಂದ ಪದ್ಧತಿಯಾಗಿದೆ. ಖಚಿತವಾಗಿ ಇಂತಹ ದಿನದಂದು ನಮ್ಮ ನಡುವೆ ಪರಿಚಯ ಅಥವಾ ಸ್ನೇಹ ಆರಂಭಗೊಂಡಿತು ಎಂದು ಹೇಳುವುದು ಅಸಾಧ್ಯದ ಸಂಗತಿಯಾದರೂ ಕಳೆದ ಹತ್ತು ವರ್ಷಗಳಿಂದ ನಾವು ಪರಸ್ಪರ ಪರಿಚಿತರು ಎನ್ನುವುದನ್ನು ನಿಖರವಾಗಿ ಹೇಳಬಹುದೇನೋ. ನಾವು ಒಂದೇ ಕಚೇರಿಯಲ್ಲಿ ಕೂಡಿ ಕೆಲಸ ಮಾಡುವವರೇನಲ್ಲ. ನಾನು ಪಿ.ಡಬ್ಲ್ಯು.ಡಿ.ನಲ್ಲಿ ನೌಕರನಾದರೆ ಶರ್ಮಾ ಎಲ್.ಐ.ಸಿ.ಯಲ್ಲಿ, ದೇಶಮುಖ ಕಾಲೇಜ್ ಲೆಕ್ಚರರ್ ಮತ್ತು ಡಿಸೋಜಾ ಬ್ಯಾಂಕ್ ಮ್ಯಾನೇಜರ್ ಹೀಗೆ ಬೇರೆ ಬೇರೆ ಇಲಾಖೆಗಳಲ್ಲಿ ಉದ್ಯೋಗಿಗಳಾಗಿದ್ದೇವೆ. ವಿಭಿನ್ನ ವೃತ್ತಿ, ಮನೋಧರ್ಮದವರಾಗಿದ್ದರೂ ಕೂಡ ನಮ್ಮ ಅಭಿರುಚಿ ಹಾಗೂ ಆಸಕ್ತಿಗಳಲ್ಲಿ ಸಾಕಷ್ಟು ಸಾಮ್ಯತೆ ಇದೆ. ಆದ್ದರಿಂದಲೇ ಕಳೆದ ಹತ್ತುವರ್ಷಗಳ ನಮ್ಮ ಸ್ನೇಹದ ನಡುವೆ ಯಾವ ಬಿರುಕು ಕಾಣಿಸಿಕೊಂಡಿಲ್ಲ. ಅಚ್ಚರಿಯ ವಿಷಯವೆಂದರೆ, ಈ ಹತ್ತು ವರ್ಷಗಳಲ್ಲಿ ನಾವು ಪರಸ್ಪರರ ಮನೆಗಳಿಗೆ ಒಮ್ಮೆಯೂ ಭೇಟಿ ನೀಡಿಲ್ಲ ಮತ್ತು ಆ ಕುರಿತು ಅದೊಂದು ವಿಚಿತ್ರ ಸಂಗತಿ ಎನ್ನುವಂತೆ ಒಮ್ಮೆಯೂ ನಾವು ಮಾತನಾಡಿಕೊಂಡಿಲ್ಲ. ಹಾಗೆ ಭೇಟಿ ನೀಡಲು ಕಾಲ ಕೂಡಿ ಬರದೆ ಇರುವುದಕ್ಕೆ ಕಾರಣ ನಮ್ಮ ನಮ್ಮ ವೃತ್ತಿ ಬೇರೆಯಾಗಿರುವುದು ಒಂದಾದರೆ ಇನ್ನೊಂದು ನಮ್ಮ ಜಾತಿ ಮತ್ತು ಸಂಪ್ರದಾಯಗಳ ಹಿನ್ನೆಲೆ ಬೇರೆ ಬೇರೆಯಾಗಿರುವುದೂ ಆಗಿರಬಹುದೆಂದು ನಾನು ಅನೇಕ ಸಲ ಯೋಚಿಸಿದ್ದೇನೆ. ನಾವು ವಿಭಿನ್ನ ಪ್ರದೇಶಗಳಿಂದ ಬಂದದ್ದೂ ಮತ್ತೊಂದು ಮುಖ್ಯ ಕಾರಣವಾಗಿರಬೇಕು. ಶರ್ಮಾ ಉತ್ತರ ಭಾರತದವನಾದರೆ, ದೇಶಮುಖ ಮಹಾರಾಷ್ಟ್ರದವನು, ಡಿಸೋಜಾ ಗೋವಾ ರಾಜ್ಯದ ಮೂಲೆಯ ಹಳ್ಳಿಯೊಂದರಿಂದ ಬಂದಿದ್ದ ಮತ್ತು ನಾನು ಕರ್ನಾಟಕದವನು. ನಮ್ಮೆಲ್ಲರ ನಡುವೆ ಇರುವ ಒಂದು ಸಮಾನ ಅಂಶವೆಂದರೆ, ನಾವೆಲ್ಲ ವಾಸಿಸುತ್ತಿರುವುದು ಕರ್ನಾಟಕದಲ್ಲಿ ಮತ್ತು ನಾಲ್ವರಿಗೂ ಕನ್ನಡ ಭಾಷೆ ಓದಲು ಹಾಗೂ ಬರೆಯಲು ಬರುತ್ತದೆ. ಒಂದರ್ಥದಲ್ಲಿ ಭಾಷೆಯೇ ನಮ್ಮನ್ನು ಒಂದುಗೂಡಿಸಿದೆಯೆಂದು ಹೇಳಬಹುದು. ನಂತರ ನಮ್ಮ ನಮ್ಮ ಆಸಕ್ತಿ ಮತ್ತು ಅಭಿರುಚಿ ಒಂದೇರೀತಿ ಇರುವುದು ತಿಳಿದು ನಮ್ಮ ನಡುವಣ ಅನ್ಯೋನ್ಯತೆ ಮತ್ತಷ್ಟು ಗಾಢವಾಗಲು ಕಾರಣವಾಯಿತು.

ಕಳೆದ ಹದಿನೈದು ದಿನಗಳಿಂದ ಶರ್ಮಾ ನಮ್ಮ ಬೆಳಗ್ಗಿನ ಮತ್ತು ಸಾಯಂಕಾಲದ ವಾಕಿಂಗ್‌ನಲ್ಲಿ ನಮ್ಮೊಂದಿಗೆ ಕಾಣಿಸಿಕೊಂಡಿರಲಿಲ್ಲ. ಅದು ಜನರ ಚರ್ಚೆಯ ಮುಖ್ಯ ವಿಷಯವಾಗಿದೆ ಎಂದು ನಮಗೆ ಗೊತ್ತಾದದ್ದು ಮೊನ್ನೆ ಪಾರ್ಕ್‌ನಲ್ಲಿ ಯಜಮಾನರೊಬ್ಬರು ನಮ್ಮನ್ನು ಕರೆದು ಆ ಕುರಿತು ಮಾತನಾಡಿಸಿದಾಗ. ಶರ್ಮಾನ ಅನುಪಸ್ಥಿತಿ ಹೀಗೆ ನಮ್ಮ ಎರಡು ಹೊತ್ತಿನ ವಾಯುವಿಹಾರದ ಪರಿಸರದಲ್ಲಿ ನಮಗೆ ಗೊತ್ತಿಲ್ಲದೆ ಚರ್ಚೆಗೆ ಒಳಗಾಗಿದೆ ಎನ್ನುವುದೇ ನಮ್ಮ ಗುಂಪಿನಲ್ಲಿ ಪುಳಕಕ್ಕೆ ಕಾರಣವಾಗಿತ್ತು. ನಮ್ಮಲ್ಲಿ ಸ್ವಲ್ಪ ಹೆಚ್ಚು ಮಾತನಾಡುವವನೆಂದರೆ ಶರ್ಮಾ ಮಾತ್ರ. ತಾನು ಕೇಳಿದ ಮತ್ತು ನೋಡಿದ ಸಂಗತಿಗಳನ್ನು ರಂಜಕವಾಗಿ ಶರ್ಮಾ ಬಣ್ಣಿಸುವಾಗಲೆಲ್ಲ ನಾವು ಮಾತನಾಡದೆ ಕೇವಲ ಕೇಳುಗರಾಗುತ್ತಿದ್ದೆವು. ಹಾಗೆಂದು ಶರ್ಮಾ ನಮ್ಮನ್ನು ಮೆಚ್ಚಿಸಬೇಕೆಂದು ಮಾತನಾಡುತ್ತಿರಲಿಲ್ಲ. ಅವನು ಹೇಳುವ ಸಂಗತಿಗಳಲ್ಲಿ ಬಹುಮಟ್ಟಿಗೆ ಸತ್ಯಾಂಶವಿರುತ್ತಿತ್ತು. ತನ್ನ ಪರಿವಾರದೊಂದಿಗೆ ಉತ್ತರ ಭಾರತದ ತನ್ನೂರಿಗೆ ಹೋಗಿರುವ ಶರ್ಮಾ ಈ ವಾಯುವಿಹಾರದ ಸ್ನೇಹಿತರ ಬಳಗಕ್ಕೆ ಹೇಳಬೇಕಾದ ಬಹುಮುಖ್ಯವಾದ ವಿಷಯವನ್ನು ಮರಳಿ ಬರುವಾಗ ತನ್ನೊಂದಿಗೆ ತಂದೇ ತರುತ್ತಾನೆ ಎನ್ನುವ ವಿಶ್ವಾಸ ನಮ್ಮ ಗುಂಪಿನ ಮೂವರಲ್ಲೂ ಇತ್ತು.